ಚಿಂತಾಮಣಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು

3219 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಂತಾಮಣಿ ವಿಧಾನಸಭಾ ಕ್ಷೇತ್ರವು ಕರ್ನಾಟಕದ ಗಡಿ ಪ್ರದೇಶವಾಗಿದ್ದು ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿದೆ, ಆ ಕ್ಷೇತ್ರದಲ್ಲಿ ಪದೇ ಪದೇ ಅಶಾಂತಿ ಉಂಟಾಗುತ್ತಿರುವುದು (ಉದಾ: ಕಂಬಾಲಪಲ್ಲಿ) ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅಶಾಂತಿ ಉಂಟಾದ ಸ್ಥಳಗಳಿಗೆ ಧಾವಿಸಲು ಸ್ಥಳೀಯ ಆರಕ್ಷಕ ದಳಗಳಿಗೆ ವಾಹನ ಒದಗಿಸಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಚಿಂತಾಮಣಿ ಕಸಬಾ ಮತ್ತು ಕೆಂಚಾರ್ಲಹಳ್ಳಿ ಠಾಣೆಗಳಿಗೆ ಒಂದೊಂದು ಜೀಪು ಮಾದರಿ ವಾಹನ ಅಗತ್ಯವಿದೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ವಾಹನಗಳನ್ನು ಒದಗಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?*

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಚಿಂತಾಮಣಿ ತಾಲ್ಲೂಕು ಕಂಬಾಲಪಲ್ಲಿ ಗ್ರಾಮದಲ್ಲಿ ನಡೆದ ಘಟನೆಯ ನಂತರ ಶಾಂತಿಯನ್ನು ಭಂಗ ಮಾಡುವಂತಹ ಯಾವುದೇ ದೊಡ್ಡ ಘಟನೆ ನಡೆದಿಲ್ಲ.

ಆ) ಇನ್ನೂ ಕೆಲವು ಠಾಣೆಗಳಿಗೆ ವಾಹನ ಒದಗಿಸದಿರುವುದು ಗಮನಕ್ಕೆ ಬಂದಿದೆ.

ಇ) ಹೌದು.

ಈ) ಕೆಂಚಾರ್ಲಹಳ್ಳಿ ಠಾಣೆಗೆ ಜೀಪನ್ನು ಒದಗಿಸಲಾಗಿದೆ. ಚಿಂತಾಮಣಿ ಕಸಬಾ ಠಾಣೆಗೆ ಜೀಪು ಒದಗಿಸುವುದನ್ನು ಪರಿಶೀಲಿಸಲಾಗುವುದು.

ಹುಬ್ಬಳ್ಳಿ ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಟೆಲ್ಕೋ ಉದ್ದಿಮೆ ಪ್ರಾರಂಭ

3220 - ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಟಾಟಾ ಕಂಪನಿಯವರ ಹೊಸ ಟೆಲ್ಕೋ ಉದ್ದಿಮೆ ಪ್ರಾರಂಭಿಸುವ ಕುರಿತು ಭೂಸ್ವಾಧೀನಪಡಿಸಿಕೊಳ್ಳಲಾಗಿದೆಯೇ?*

ಆ) *ಹಾಗಿದ್ದಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲಾದ ಭೂಮಿಯ ವಿಸ್ತೀರ್ಣ ಎಷ್ಟು?*

ಇ) *ಸದರಿ, ಉದ್ದಿಮೆ ಪ್ರಾರಂಭಿಸುವ ಕೆಲಸವು ಯಾವ ಹಂತದಲ್ಲಿದೆ, ಮತ್ತು ಸದರಿ ಉದ್ದಿಮೆ ಎಂದಿನಿಂದ ತನ್ನ ಕೆಲಸ ಪ್ರಾರಂಭಿಸಲಿದೆ, ವಿವರ ನೀಡುವುದು?*